ಯುವ ಜಪಾನೀಯರಿಗೆ ಗೊತ್ತಿಲ್ಲ. ಅವನು ಯಾರು ಎನ್ನುತ್ತಾರೆ. ಅವನ ಹೆಸರಿನಲ್ಲಿ ಸ್ಟುಡಿಯೊ ಇದೆ. ಆದರೆ, ಆ ಸ್ಟುಡಿಯೊಗೂ ಕುರೋಸಾವಾಗೂ ಯಾವುದೇ ಸಂಬಂಧ ಇಲ್ಲ; ನಮ್ಮಲ್ಲಿ ಪುಟ್ಟಣ್ಣ ಕಣಗಾಲ್ ಹೆಸರಿನ ಸ್ಟುಡಿಯೊ ಇರುವಂತೆ. ಅವನ ಸಮಾಧಿಯನ್ನು ಹುಡುಕಿಕೊಂಡು ಹೋದದ್ದು ರೋಚಕ ಗಳಿಗೆ' ಎಂದರು.

ನಾಗತಿಹಳ್ಳಿಯವರ ಪ್ರಧಾನ ಆಸಕ್ತಿಗಳಲ್ಲಿ ಪ್ರವಾಸ ಮುಖ್ಯವಾದುದು. ಅಲೆಮಾರಿಯಾಗಿ ಅವರು ಎಡತಾಕಿದ ದೇಶಗಳಲ್ಲಿ ಜಪಾನ್ 46ನೆಯದು. 'ಈ ಅಲೆದಾಟದಿಂದ ನನ್ನ ಆಲೋಚನಾಕ್ರಮದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಅಲೆದಾಟ ಪ್ಯಾಷನ್ ಆದಾಗ ಲೇಖಕನಿಗೆ ಬಹಳಷ್ಟು ಉಪಯೋಗವಾಗುತ್ತದೆ. ಇಂಗ್ಲೆಂಡ್‌ನಲ್ಲಿದ್ದಾಗ ಸಚಿವನೊಬ್ಬ ತನ್ನ ಖಾತೆಗೆ ಸಂಬಂಧಿಸಿದ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ 15 ನಿಮಿಷ ತಡವಾಗಿ ಬಂದುದಕ್ಕೆ ರಾಜೀನಾಮೆ ಕೊಟ್ಟ. ನಮ್ಮಲ್ಲಿನ ರಾಜಕೀಯ ಪ್ರಸಂಗಗಳನ್ನು ನೆನಪಿಸಿಕೊಂಡರೆ ಅಲ್ಲಿನ ಘಟನೆ ಆಶ್ಚರ್ಯಹುಟ್ಟಿಸುತ್ತದೆ' ಎಂದರು. ಜಪಾನ್ ಪ್ರವಾಸದ ಬಗ್ಗೆ ಉತ್ಸುಕತೆಯಿಂದ ಮಾತನಾಡುತ್ತಿದ್ದ ಅವರು ಮತ್ತೆ ಹಿತ್ತಲಿಗೆ ಬಂದುದು, ನಾಗತಿಹಳ್ಳಿ ಕುರಿತು ಪ್ರಶ್ನೆ ಕೇಳಿದಾಗ.

- ನಿಮ್ಮ ಹೆಸರಿನೊಂದಿಗೆ ಸೇರಿಕೊಂಡಿರುವ ನಾಗತಿಹಳ್ಳಿಗೆ ನಿಮ್ಮ ಜೀವನದಲ್ಲಿ ಇರುವ ಪಾತ್ರ ಯಾವ ಬಗೆಯದು?

ಈಗ ಹಿಂತಿರುಗಿ ನೋಡಿದರೆ – ನನ್ನ ಬಾಲ್ಯದ ಹಳ್ಳಿ ನನಗೆ ತುಂಬಾ ನೋವು ಕೊಟ್ಟಿದೆ, ತುಂಬಾ ಅವಮಾನಿಸಿದೆ. ಇದನ್ನು ನಾನು ಸಿಟ್ಟಿನಿಂದ, ಬೇಸರದಿಂದ ಹೇಳುತ್ತಿಲ್ಲ. ಎಲ್ಲ ಹಳ್ಳಿಗಳೂ ಎಲ್ಲರ ಪಾಲಿಗೆ ಒಂದು ಸಂದರ್ಭದಲ್ಲಿ ಹಾಗೆಯೇ ಇರುತ್ತವೇನೋ. ನಮ್ಮ ಬೆಳವಣಿಗೆಗೆ ಅವಮಾನಗಳು ಕೂಡ ಬೇಕೇನೋ. ಹಳ್ಳಿಗಾಡಿನ ಅನೇಕ ಯುವಕರು ಅನುಭವಿಸಿರುವ ಅನುಭವಗಳೇ ನನ್ನವೂ ಹೌದು. ಅಪ್ಪ ನಮ್ಮನ್ನೆಲ್ಲ ತುಂಬಾ ಕಷ್ಟದಿಂದ ಓದಿಸುತ್ತಿದ್ದರು. ಶಾಲೆಯ ಮೇಷ್ಟರುಗಳೆಲ್ಲ ದುಡ್ಡು ಹಾಕಿ ನನ್ನ ಹೈಸ್ಕೂಲ್ ಶುಲ್ಕವನ್ನು ತುಂಬಿದ್ದೂ ಇದೆ. ನನ್ನ ಹಳ್ಳಿ, ಅಲ್ಲಿನ ಬಡತನ, ಅಪ್ಪನ ಸಾಲಗಳು – ಇದರಾಚೆಗೆ ಜಿಗಿಯಲಿಕ್ಕೆ ಮನಸ್ಸು ತಹತಹಿಸುತ್ತಿತ್ತು. ನಾಟಕದ ಕಂಪನಿ ಜೊತೆ ಓಡಿಹೋಗಿ ಮತ್ತೆ ಹಿಂದಿರುಗಿ ಬಂದು ಹಳ್ಳಿಯಲ್ಲಿ ನಾಟಕ ಆಡಿಸಲು ಪ್ರಯತ್ನಿಸುತ್ತಿದ್ದೆ. ಅದೇ ವೇಳೆ ಪಿಯುಸಿಯಲ್ಲಿ ಫೇಲಾದೆ. ಗಣಿತ ಹಾಗೂ ವಿಜ್ಞಾನ ನನ್ನ ಪರಮಶತ್ರುಗಳು. ಪ್ರೈಮರಿ ಸ್ಕೂಲ್ ಮೇಷ್ಟ್ರಾಗಿದ್ದ ನನ್ನ ಅಪ್ಪ ಪಿಯುಸಿ ವಿಜ್ಞಾನ ವಿಭಾಗಕ್ಕೆ ನನ್ನನ್ನು ಹಾಕಿದ್ದರು – ಮಗ ಡಾರ್ವಿನ್ ಆಗ್ತಾನೆ ಎಂದು ತಿಳಕೊಂಡು. ಊರಿಗೆ ಬಂದು ವಿಫಲ ಕ್ರಾಂತಿಕಾರಿಗಳ ಹಾಗೆ ಸಂಘ ಕಟ್ಟಿಕೊಂಡು ಓಡಾಡುತ್ತಿದ್ದೆ. ಊರವರು ಅನುಮಾನದಿಂದ ನೋಡುತ್ತಿದ್ದರು. ಈಗ ಊರಲ್ಲಿ ಒಂದಷ್ಟು ಸಾಂಸ್ಥಿಕ ಕೆಲಸಗಳನ್ನು ಮಾಡುತ್ತಿದ್ದೇನೆ; ಆ ಕೆಲಸವನ್ನು ಊರು ಗೌರವದಿಂದ ನೋಡುತ್ತಿದೆ. ಇದೇ ಕೆಲಸವನ್ನು ಆಗಲೂ ಅಷ್ಟೇ ತೀವ್ರತೆಯಿಂದ ಹಾಗೂ ಭಾವನಾತ್ಮಕವಾಗಿ ಮಾಡುತ್ತಿದ್ದೆ. ಊರಿನಲ್ಲೊಂದು ಬೀದಿದೀಪ ಉರಿಸಬೇಕೆಂದಾದಾಗ, ಮನೆಗೊಂದು ತೆಂಗಿನಕಾಯಿ ಸಂಗ್ರಹಿಸುತ್ತಿದ್ದೆವು. ಜನ ದುಡ್ಡು ಕೊಡುತ್ತಿರಲಿಲ್ಲವಾದ್ದರಿಂದ ತೆಂಗಿನಕಾಯಿ ಸಂಗ್ರಹಿಸುತ್ತಿದ್ದೆವು. ಈ ಕಾಯಿಗಳನ್ನು ಹರಾಜು ಹಾಕಿ ಇಡೀ ವರ್ಷ ದೀಪ ಉರಿಸುತ್ತಿದ್ದೆವು. ಆದರೆ, ಇಂಥ ಕೆಲಸಗಳನ್ನು ಊರು ಗೇಲಿಯ ದೃಷ್ಟಿಯಿಂದ ನೋಡುತ್ತಿತ್ತು. ಆಗಲೇ ನಾವು ಊರಲ್ಲಿ ಒಂದು ಸಣ್ಣ ರಂಗಮಂದಿರ